I/464515/2023

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ: E- 1096150 DPUE-EST10OTH/148/2023-PLCY

ದಿನಾಂಕ: 04-08-2023

## ಜ್ಞಾಪನ

ವಿಷಯ: 2023ರ ಸಾರ್ವತ್ರಿಕ ವರ್ಗಾವಣೆಯ ಕೌನ್ಸೆಲಿಂಗ್‌ಗೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಾಂಶುಪಾಲರ/ಉಪನ್ಯಾಸಕರುಗಳ ಖಾಲಿ ಹುದ್ದೆಗಳ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020, ದಿ:27-03-2020.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 47 ಶಾಸನ 2021, ದಿ: 18-01-2022.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021, ದಿ: 12-05-2022.
4. ಈ ಕಚೇರಿಯ ಜ್ಞಾಪನ ಸಂಖ್ಯೆ: E-1096150 DPUE-EST10OTRS/148/2023-PLCY, ದಿನಾಂಕ:02.06.2023, 22.06.2023, 10.07.2023, 20.07.2023 ಮತ್ತು 02.08.2023.

-*-

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020 ರನ್ವಯ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಪ್ರಾಂಶುಪಾಲರು / ಉಪನ್ಯಾಸಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2022 ರ ನಿಯಮ 4 (ಹೆಚ್) ರಲ್ಲಿ ಉಲ್ಲೇಖಿಸಿರುವಂತೆ ವರ್ಗಾವಣೆ ವೇಳಾಪಟ್ಟಿ ಪ್ರಕಟಿಸುವ ಮೊದಲು ಪ್ರಾಂಶುಪಾಲರ / ಉಪನ್ಯಾಸಕರ ಅರ್ಹತಾದಾಯಕ ಅಂಕ (Weighted Score) ಗಳನ್ನು ಪ್ರಕಟಿಸುವ ಸಂಬಂಧ ವೇತನ ಸೆಳೆದು ವಿತರಣೆ ಮಾಡುವ ಅಧಿಕಾರಿಯು (DDO) Departmental Online Portal ನ ಲಾಗಿನ್ ಮೂಲಕ ಪ್ರಾಂಶುಪಾಲರ / ಉಪನ್ಯಾಸಕರ ಸೇವಾ ವಿವರಗಳನ್ನು (Update) ನವೀಕರಿಸಲು ದಿನಾಂಕ:05-06-2023 ವರೆಗೆ ಉಲ್ಲೇಖ-4ರಲ್ಲಿ (ದಿನಾಂಕ: 02.06.2023) ಅವಕಾಶ ಕಲ್ಪಿಸಲಾಗಿತ್ತು.

ಅದರಂತೆ, ನವೀಕರಿಸಲ್ಪಟ್ಟ ಸೇವಾ ವಿವರಗಳನ್ವಯ ಪ್ರಾಂಶುಪಾಲರ/ಉಪನ್ಯಾಸಕರ ಅರ್ಹತಾದಾಯಕ ಅಂಕ (Weighted Score) ಗಳ ಪಟ್ಟಿಯನ್ನು ಉಲ್ಲೇಖ-4ರಲ್ಲಿ (ದಿನಾಂಕ:22.06.2023ರಂದು) ಅನುಬಂಧಿಕರಿಸಿ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲ್ಪಟ್ಟಿತ್ತು. ಸದರಿ ಅರ್ಹತಾದಾಯಕ ಅಂಕಪಟ್ಟಿಗೆ ಅಕ್ಷೇಪಣೆಗಳೇನಾದರೂ ಏನಾದರೂ ಇದ್ದಲ್ಲಿ, ಪೂರಕ ದಾಖಲೆಗಳನ್ನು ಪ್ರಾಂಶುಪಾಲರ ದೃಢೀಕರಣದೊಂದಿಗೆ ದಿನಾಂಕ:27.06.2023ರೊಳಗಾಗಿ ಸಲ್ಲಿಸಲು ಸೂಚಿಸಲಾಗಿತ್ತು.

ಅದರಂತೆ, ಉಲ್ಲೇಖ-5ರನ್ವಯ ಸ್ವೀಕೃತವಾದ ಅಕ್ಷೇಪಣೆಗಳನ್ನು ಪರಿಶೀಲಿಸಿ, ನಿಯಮಾನುಸಾರ ಅರ್ಹ ಆಕ್ಷೇಪಣೆಗಳನ್ನು ಪರಿಗಣಿಸಿ, ವೇತನ ಸೆಳೆದು ವಿತರಣೆ ಮಾಡುವ ಅಧಿಕಾರಿಯು (DDO) Departmental Portalನ ಲಾಗಿನ್‌ನಲ್ಲಿ ನವೀಕರಿಸಲ್ಪಟ್ಟ ಸೇವಾ ವಿವರಗಳನ್ವಯ ವರ್ಗಾವಣೆಗೆ ಅರ್ಹ ಪ್ರಾಂಶುಪಾಲರ/ಉಪನ್ಯಾಸಕರ ಅಂತಿಮ ಅರ್ಹತಾದಾಯಕ ಅಂಕಗಳ (Weighted Score) ಪಟ್ಟಿಯನ್ನು ದಿನಾಂಕ:10.07.2023ರಂದು ಪ್ರಕಟಿಸಲಾಗಿತ್ತು. ಅನುಚಿತ ತಪ್ಪು ಮಾಹಿತಿಯನ್ನು ನಮೂದಿಸಿರುವ ಪ್ರಾಂಶುಪಾಲರು, ಸದರಿ ತಪ್ಪುಗಳನ್ನು ಸರಿಪಡಿಸಲು ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಗಳನ್ನು ಪರಿಶೀಲಿಸಲಾಗಿ, ದಿನಾಂಕ:20.07.2023ರಂದು ಸಾರ್ವತ್ರಿಕ ವರ್ಗಾವಣೆಗೆ ಅರ್ಹ ಉಪನ್ಯಾಸಕರ ಪಟ್ಟಿಯನ್ನು ಸರಿಪಡಿಸಿ ಪ್ರಕಟಿಸಲಾಗಿತ್ತು.

ಮುಂದುವರೆದು, 2023ರ ಸಾರ್ವತ್ರಿಕ ವರ್ಗಾವಣೆಗೆ ಪ್ರಕಟಿಸಲ್ಪಟ್ಟ ಅರ್ಹ ಪ್ರಾಂಶುಪಾಲರು/ ಉಪನ್ಯಾಸಕರಲ್ಲಿ, ವರ್ಗಾವಣೆ ಬಯಸಿ ವಿವಿಧ ಅದ್ಯತೆಯಡಿ ಅರ್ಜಿ ಸಲ್ಲಿಸಿದ ಪ್ರಾಂಶುಪಾಲರ/ಉಪನ್ಯಾಸಕರ ಅರ್ಜಿಗಳನ್ನು ನಿಯಮಾನುಸಾರ

I/464515/2023

ಪರಿಶೀಲಿಸಿ, 2023ರ ಸಾರ್ವತ್ರಿಕ ವರ್ಗಾವಣೆಯ ಕೌನ್ಸೆಲಿಂಗ್‌ಗೆ ಅರ್ಹ / ಅನರ್ಹ ಪ್ರಾಂಶುಪಾಲರು/ಉಪನ್ಯಾಸಕರ ವಿಷಯವಾರು ವಿವಿಧ ಅಧ್ಯತೆಗಳನ್ನು ಪ್ರತ್ಯೇಕ ಪಟ್ಟಿ ಮಾಡಿ, ತಾತ್ಕಾಲಿಕ ಪಟ್ಟಿಯನ್ನು ದಿನಾಂಕ:02.08.2023ರಂದು ಪ್ರಕಟಿಸಲಾಗಿತ್ತು.

ಶಾಲಾ ಶಿಕ್ಷಣ ಇಲಾಖೆ (ಸರ್ಕಾರಿ ಪದವಿ ಪೂರ್ವ ಕಾಲೇಜು)ಗಳಲ್ಲಿನ ಪ್ರಾಂಶುಪಾಲರ/ಉಪನ್ಯಾಸಕರುಗಳ ಖಾಲಿ ಹುದ್ದೆಗಳ ಪಟ್ಟಿಯನ್ನು ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರವರಿಗೆ ಕಳುಹಿಸಲಾಗಿ, ಬಂದಂತಹ ಆಕ್ಷೇಪಣೆಗಳನ್ನು ಪರಿಶೀಲಿಸಿ, **ಪ್ರಾಂಶುಪಾಲರ/ಉಪನ್ಯಾಸಕರುಗಳ ಖಾಲಿ ಹುದ್ದೆಗಳ ತಾತ್ಕಾಲಿಕ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧಗಳಲ್ಲಿ ಪ್ರಕಟಿಸಲಾಗಿದೆ.**

ಪ್ರಕಟಿಸಲ್ಪಟ್ಟ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ, ಪೂರಕ ದಾಖಲೆಗಳೊಂದಿಗೆ ಸ್ಪಷ್ಟ ಮಾಹಿತಿಯನ್ನು (ವ್ಯತ್ಯಾಸವಿರುವ ಮಾಹಿತಿಯ ಕ್ರಮ ಸಂಖ್ಯೆ ಮತ್ತು ನವೀಕರಿಸುವ ಮಾಹಿತಿ) ಪ್ರಾಂಶುಪಾಲರು ದೃಢೀಕರಿಸಿ, ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸುವುದು. ಜಿಲ್ಲಾ ಉಪ ನಿರ್ದೇಶಕರು ಸಲ್ಲಿತವಾದ ಅಕ್ಷೇಪಣೆಗಳನ್ನು ಪರಿಶೀಲಿಸಿ, ಪರಿಗಣಿಸಬಹುದಾದ ಅಕ್ಷೇಪಣೆಗಳನ್ನು ಕ್ರೋಢಿಕರಿಸಿ, ದೃಢೀಕರಿಸಿ ಜಂಟಿ ನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಬೆಂಗಳೂರು, ಇವರಿಗೆ dpuetransfer22@gmail.com ಇ-ಮೇಲ್ ವಿಳಾಸಕ್ಕೆ ದಿನಾಂಕ:08.08.2023ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಿದಲ್ಲಿ ಮಾತ್ರ ಪರಿಗಣಿಸಲಾಗುವುದು. ನಿಗದಿತ ದಿನಾಂಕದ ನಂತರ ಯಾವುದೇ ಅಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ವರ್ಗಾವಣೆ ಪ್ರಕ್ರಿಯೆಯು ತುಂಬಾ ಗಂಭೀರವಾದ ವಿಷಯವಾಗಿದ್ದು ಮತ್ತು ಪ್ರಾಮುಖ್ಯತೆವುಳ್ಳದ್ದಾಗಿರುವುದರಿಂದ, ಖಾಲಿ ಹುದ್ದೆಗಳ ಕುರಿತು ತಪ್ಪು ಮಾಹಿತಿ ನೀಡಿದಲ್ಲಿ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕು ಮತ್ತು ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ.

2023-24 ನೇ ಸಾಲಿನ ಪ್ರಾಂಶುಪಾಲರ/ಉಪನ್ಯಾಸಕರ ಸಾರ್ವತ್ರಿಕ ವರ್ಗಾವಣೆಯ ವೇಳಾ ಪಟ್ಟಿಯಲ್ಲಿ ಯಾವುದಾದರೂ ಬದಲಾವಣೆಗಳಿದಲ್ಲಿ ಪ್ರಾಂಶುಪಾಲರು/ಉಪನ್ಯಾಸಕರಿಗೆ ಜಿಲ್ಲಾ ಉಪ ನಿರ್ದೇಶಕರ ಮೂಲಕ ತಿಳಿಸಲಾಗುವುದು.

**Signed by Sindhu B Rupesh**
**Date: 04-08-2023 14:51:30**

ನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ).

**ಇವರಿಗೆ:**

1. ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ - ಅಗತ್ಯ ಕ್ರಮಕ್ಕಾಗಿ.
2. ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ ಕಾಲೇಜುಗಳ) ಪ್ರಾಂಶುಪಾಲರಿಗೆ - ಜಿಲ್ಲಾ ಉಪ ನಿರ್ದೇಶಕರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ ಕಾಲೇಜುಗಳ) ಉಪನ್ಯಾಸಕರಿಗೆ - ಪ್ರಾಂಶುಪಾಲರ ಮೂಲಕ ಅಗತ್ಯ ಕ್ರಮಕ್ಕಾಗಿ.

**ಪ್ರತಿ:**

1. ನಿರ್ದೇಶಕರು/ಜಂಟಿ ನಿರ್ದೇಶಕರು(ಆಡಳಿತ)/(ಮಾನ್ಯತೆ ಮತ್ತು ಅನುದಾನ)/(ಶೈಕ್ಷಣಿಕ) ಇವರ ಆಪ್ತ ಶಾಖೆಗೆ.
2. ಸಹಾಯಕ ನಿರ್ದೇಶಕರು - ಇ-ಆಡಳಿತ, ನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)- ಇಲಾಖಾ ಜಾಲತಾಣದಲ್ಲಿ ಅಳವಡಿಸಲು.
3. ಕಚೇರಿ ಪ್ರತಿ.